# ರೊಬಾಟ್ ವೈದ್ಯ

ಅನುಭವಿ ವೈದ್ಯರ ನುರಿತ ಕೈಗಳ ನೆರವಿಲ್ಲದೆ ಶಸ್ತ್ರಚಿಕಿತ್ಸೆ ನೆರವೇರಿಸಲು ಸಾಧ್ಯವಿದೆಯೆ?

'ಹೌದು' ಎನ್ನುತ್ತವೆ ರೊಬಾಟ್ ಕೈಗಳು. ಇದು ಹಾಲಿವುಡ್‌ನ ವೈಜ್ಞಾನಿಕ ಚಲನಚಿತ್ರದಂತೆ ತೋರಬಹುದು. ಆದರೆ ಮುಂಬೈ ಆಸ್ಪತ್ರೆಯೊಂದರಲ್ಲಿ ಪ್ರಾಸ್ಟೇಟ್ ಕ್ಯಾನ್ಸರ್ ರೋಗಿಯೊಬ್ಬನ ಮೇಲೆ ರೊಬಾಟ್‌ನ ಲೋಹದ ಕೈಗಳು ಚಕಚಕನೆ ಶಸ್ತ್ರಚಿಕಿತ್ಸೆ ನಡೆಸಿವೆ. ಅದೂ ಆಳವಾದ ಗಾಯ ಮಾಡದೆ! ಜಾಗರೂಕತೆಯಿಂದ ಆಯಕಟ್ಟಿನ ಜಾಗದಲ್ಲಿ ಕತ್ತರಿಸಿ, ಪ್ರಾಸ್ಟೇಟ್ ಗ್ರಂಥಿ ಎಲ್ಲಿದೆಯೋ ಅಲ್ಲೇ ಕೈತೂರಿಸಿ ಕ್ಯಾನ್ಸರ್ ಗಡ್ಡೆಯನ್ನು ಈಚೆಗೆಳೆದಿವೆ ರೊಬಾಟ್ ಕೈಗಳು. ಶಸ್ತ್ರಚಿಕಿತ್ಸೆ ಕೊಠಡಿಯ ಮೂಲೆಯಲ್ಲಿ ಕುಳಿತು ಜಾಯ್‌ಸ್ಟಿಕ್ ಆಡಿಸುವ ಕೆಲಸವನ್ನಷ್ಟೇ ವೈದ್ಯರು ಮಾಡಿದ್ದು.

ಇದು ನಡೆದದ್ದು ಮುಂಬೈನ ಬಾಂದ್ರಾ– ಕುರ್ಲಾ ಕಾಂಪ್ಲೆಕ್ಸ್‌ನಲ್ಲಿರುವ ಏಷ್ಯನ್ ಹೃದ್ರೋಗ ಆಸ್ಪತ್ರೆಯ ವಟ್ಟಿಕುಟಿ ರೊಬಾಟಿಕ್ ಸರ್ಜರಿ ಸಂಸ್ಥೆಯಲ್ಲಿ. ಶಸ್ತ್ರಚಿಕಿತ್ಸೆಗೆ ಒಳಗಾದವರು 61 ವರ್ಷ ವಯಸ್ಸಿನ ಪ್ರಾಸ್ಟೇಟ್ ಕ್ಯಾನ್ಸರ್ ರೋಗಿ ರಾಜೇಂದ್ರ ದುಗಾರ್. ಹಿಂದೆ ಪ್ರಾಸ್ಟೇಟ್ ಕ್ಯಾನ್ಸರ್ ರೋಗಿಗಳ ಮೇಲೆ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದರೆ 10 ಇಂಚು ಉದ್ದಕ್ಕೆ ಕೊಯ್ಯಬೇಕಾಗಿತ್ತು. ನಂತರ ಕನಿಷ್ಠ ಗಾಯ ಮಾಡುವ ಲ್ಯಾಪ್ರೋಸ್ಕೋಪಿ ಬಂತು. ಈಗ ಅತ್ಯಾಧುನಿಕ ರೊಬಾಟ್ ಶಸ್ತ್ರಚಿಕಿತ್ಸೆ. ಸಸ್ತ್ರಚಿಕಿತ್ಸೆಗೆ ಒಳಗಾದ ಕೊಲ್ಕತ್ತಾ ಮೂಲದ ದುಗಾರ್ ಮರುದಿನವೇ ಓಡಾಡಲು ಆರಂಭಿಸಿದ್ದಲ್ಲದೇ ಒಂದೇ ವಾರದಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಮನೆಗೆ ತೆರಳಿದರು!

ಆಸ್ಪತ್ರೆಯ ರೊಬಾಟ್ ಯೂರೋಸರ್ಜನ್ ಡಾ.ಸಂಜೀವ್ ಕೌಲ್ ಈ ರೊಬಾಟ್ ಕೈಗಳನ್ನು ನಿಯಂತ್ರಿಸಿದ್ದು. ಅವರ ಪ್ರಕಾರ, ಲ್ಯಾಪ್ರೋಸ್ಕೋಪಿಗಿಂತ ಇದು ಹೆಚ್ಚು ಕರಾರುವಾಕ್ಕು ಮತ್ತು ಯಶಸ್ಸಿನ ಶೇಕಡಾವಾರು ಪ್ರಮಾಣವೂ ಜಾಸ್ತಿ. ಶಸ್ತ್ರಚಿಕಿತ್ಸೆಯ ನಂತರ ಹೆಚ್ಚಿನ ನಿಗಾ ಅಗತ್ಯವಿಲ್ಲ. ಪ್ರಾಸ್ಟೇಟ್ ಕ್ಯಾನ್ಸರ್‌ನ ಸಾಂಪ್ರದಾಯಕ  ಶಸ್ತ್ರಚಿಕಿತ್ಸೆಯ ಅಡ್ಡ ಪರಿಣಾಮವೆಂದರೆ ಷಂಡತನ. ಕನಿಷ್ಠ ಒಂದು ವರ್ಷ ಲೈಂಗಿಕ ಚಟುವಟಿಕೆ ನಡೆಸಲು ಸಾಧ್ಯವಿಲ್ಲ. ಆದರೆ ಈ ರೊಬಾಟ್ ಶಸ್ತ್ರಚಿಕಿತ್ಸೆಯಲ್ಲಿ ಕೇವಲ ಒಂದು ತಿಂಗಳ ಕಾಲ ಲೈಂಗಿಕ ಕ್ರಿಯೆಯಿಂದ ದೂರವಿದ್ದರೆ ಸಾಕು.

ಇಷ್ಟೆಲ್ಲ ಸರಿ. ಖರ್ಚು?

ಒಂದು ಮೂಲದ ಪ್ರಕಾರ ಇದಕ್ಕೆ ತಗುಲಿದ ಖರ್ಚು 6 ಲಕ್ಷ ರೂಪಾಯಿಗೂ ಅಧಿಕ. ಅಮೆರಿಕಕ್ಕೆ ತೆರಳಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕೆಂದಿದ್ದ ಜವಳಿ ಉದ್ಯಮಿ ದುಗಾಲ್ ಅವರಂಥವರಿಗೆ ಇದು ಹೆಚ್ಚಿನ ಮೊತ್ತವೇನಲ್ಲ. ಅಷ್ಟಕ್ಕೂ ಅಮೆರಿಕದಿಂದ ತರಿಸಿದ ಈ ರೊಬಾಟ್ ಬೆಲೆ 15 ಕೋಟಿ ರೂಪಾಯಿಗಿಂತ  ಅಧಿಕ. ಈ ರೊಬಾಟ್ ಅನ್ನು ಹೃದಯದ ಬೈಪಾಸ್ ಶಸ್ತ್ರಚಿಕಿತ್ಸೆ, ಕವಾಟ ಬದಲಾವಣೆ, ಗೈನಿಕ್ ಶಸ್ತ್ರಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಇದನ್ನು ನಿಯಂತ್ರಿಸಲು ತರಬೇತಿ ಪಡೆದ ವೈದ್ಯರು ಬೇಕು. ಸದ್ಯ ಭಾರತದಲ್ಲಿ 8–10 ಈ ತರಬೇತಿ ಪಡೆದ ವೈದ್ಯರಿದ್ದಾರೆ. ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ, ಮುಂಬೈನ ಹಿಂದುಜಾ ಮೊದಲಾದ 6 ಆಸ್ಪತ್ರೆಗಳಲ್ಲಿ ರೊಬಾಟ್ ಶಸ್ತ್ರಿಚಿಕಿತ್ಸೆ ಸೌಲಭ್ಯವಿದೆ. ಆದರೆ ಪ್ರಾಸ್ಟೇಟ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ರೊಬಾಟ್ ಬಳಸಿದ್ದು ದೇಶದಲ್ಲಿ ಇದೇ ಮೊದಲು.



■ ಎಸ್ಸೆಚ್



